doc-145
T-P-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 157 | ಮಂಗಳವಾರ 26–2–46 | ಬಿಡಿ ಪ್ರತಿ 3 ಪೈ

ಮದರಾಸಿನಲ್ಲಿ ಹರತಾಳ

ವಿವಿಧ ವರ್ತಮಾನ

ಮಂಚೂರಿಯಾ ಮಹತ್ಕದನದಲ್ಲಿ ಚೀನೀ ಕಮ್ಯುನಿಸ್ಟರು ಧಾಳಗಾರಂಭಿಸಿದ್ದಾರೆ

ಂ ಂ

ಜಾವಾ ಸಂಧಾನ ಪ್ರಯತ್ನದಲ್ಲಿ ಬ್ರಿಟಿಷ್ ವಿಶೇಷ ರಾಯಭಾರಿಯು ಪ್ರಧಾನ ಪಾತ್ರವಹಿಸುವನು

ಂ ಂ

ಬೊಂಬಾಯಿ, ಕಲ್ಕತ್ತಾ ಕರಾಚಿ ಪ್ರಕರಣಗಳನ್ನು ಕುರಿತು ಜಿನ್ನಾ ಸಾಹೇಬರು ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿರುವರು

ಂ ಂ

ಸೋವಿಯಟ್ ಸೇನೆಗಳು ಮಂಚೂರಿಯಾವನ್ನು ತ್ಯಜಿಸಬೇಕೆಂದು ಸೋವಿಟ್ ಕಾನ್ಸುಲೇಟಿನ ಹೊರಭಾಗದಲ್ಲಿ ಷಂಗೈ ನಗರದಲ್ಲಿ ಎರಡು ಸಾವಿರ ಚೀನೀ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು.

ಂ ಂ

ಕಲ್ಕತ್ತಾ, ಫೆ 25 — ಕ್ಯಾ || ಲಕ್ಷ್ಮಿಯವರು ಈ ದಿವಸ ಇಲ್ಲಿಗೆ ಒರುವ ನಿರೀಕ್ಷಿಸಲಾಗಿದೆ.

ಂ ಂ

ಮೊನ್ನೆಯ ದಿವಸ ವಿದ್ಯಾರ್ಥಿಗಳ ಮುಷ್ಕರವನ್ನು ಈಡಿಪ್ಪಿನ ವಿದ್ಯಾರ್ಥಿಗಳು ಹೂಡಿರುವರು.

ಂ ಂ

ಯಾಲ್ಟ ಅಂತರ್ಯ ಒಪ್ಪಂದಕ್ಕೆ ತಮ್ಮ ಅಂಗೀಕಾರವಿಲ್ಲವೆಂದು ಚೀನೀಯ ಜಕಾರಿಣಿಗಳು ಸ್ಪಷ್ಟಪಡಿಸಿ ಚೀನದ ವಿರೋಧವನ್ನು ವ್ಯಕ್ತಪಡಿಸಿರುವರು.

ಂ ಂ

ಯಾವ ರೀತಿಯ ಪ್ರದರ್ಶನಗಳನ್ನು ಕೈರೋವಿನಲ್ಲಿ ನಡೆಸಕೂಡದೆಂದು ಈ ಜಿಪ್ಸಿನ ಪ್ರಧಾನಿ ತಿಳಿಸಿರುವನು.

ಮದರಾಸಿನಲ್ಲಿ ಹರತಾಳ

ಮದರಾಸು ಫೆ 25— ಮದರಾಸಿನಲ್ಲಿ ಟ್ರಾಂ ಬಸ್ ಮುಂತಾಗಿ ಸಂಪೂರ್ಣ ವಾಹನ ಹರತಾಳ ಆಚರಿಸಲ್ಪಟ್ಟಿತ್ತು. ಬೊಂಬಾಯಿನಲ್ಲಿ ಮಿಲಟರಿಯವರು ನಡೆಸಿದ ದಬ್ಬಾಳಿಕೆಯ ಪ್ರತಿಭಟನೆ, ನಾವಿಕ ಮುಷ್ಕರದ ಸಹಾನುಭೂತಿ ವ್ಯಕ್ತಪಡಿಸಲು ಆಚರಿಸಲಾಯಿತೆಂದು ಹೇಳಲಾಗಿದೆ. ಅನೇಕ ಕಾರ್ಖಾನೆ ಕೆಲಸಗಾರರೂ ವಿದ್ಯಾರ್ಥಿಗಳು ಮುಷ್ಕರವನ್ನಾಚರಿಸಿ ಮೆರವಣಿಗೆ ನಡೆಸಿದರು. ಪೋಲೀಸರು ಎರಡು ಸಾರಿ ಲಾಠಿ ಛಾರ್ಜು ಮಾಡಿದರು

ಚರ್ಚಿಲ್ಲರ ಸಾಕ್ಷ್ಯವೇ ?

ನೂರೆಂಬರ್ಗ್, ಫೆ 23 — ರಿಬ್ಬೆಂಟ್ರಾಪನು ತನ್ನ ಪಡ ಚರ್ಚಿಲರನ್ನು ಸಾಕ್ಷಿಯಾಗಿ ಕೋರಿದ್ದಾನೆ

ಬೊಂಬಾಯಿ ಪರಿಸ್ಥಿತಿ

ಬೊಂಬಾಯಿ, ಫೆ 25 — ಮೂರು ದಿನಗಳ ಲೂಟಿ ಗಲಭೆ ಮಿಲಿಟರಿ ಗೋಳಿಬಾರು ಕಳೆದು ಇಂದು ಬೊಂಬಾಯಿ ಶಾಂತವಾಗಿದೆ 270 ಸಾವು ಸಾವಿರ ಗಾಯವು ಆಗಿದೆ ಐದು ಲಕ್ಷಟನ್ನು ಧಾನ್ಯ ಮತ್ತು ಒಂದೂಕಾಲು ಲಕ್ಷ ಟನ್ನು ಸಕ್ಕರೆ ಹಾಳಾಗಿದೆ

ರಷ್ಯಾ — ಚೈನಾ

ಲಂಡನ್ ಫೆ 25 — ಅಮೇರಿಕನ್ನರ್ ಚೈನಾದಲ್ಲಿರುವವರೆಗೆ ರಷ್ಯನರು ವಂಚರಿಯಾದಲ್ಲಿರುವರೆಂದು ಹೇಳಲಾಗಿದೆ

Specfic for Asthama

The world renowned remedy for Asthama 'Lachhmana Buti' cures Asthama radically by one single dose taken on full-moon (17-3-46)

Correspondence in English please.

Sebak Sree Janki Sewashram. Chitrakot (U.P.)

ಲಂಚದ ಪುರಾಣ

ಸನ್ಮಲ್ಲಿಯ ಮಹಾಗ್ರಂಥದೊಳಗಿರುವ ಒಂದು ಚಿಕ್ಕ ಕಥೆ. ಬಹಳ ಸ್ವಾರಸ್ಯವಾದುದು. ಆ ಕತೆಯನ್ನು ಓದಿದರೆ, ಲಂಚವೆಂದರೇನು ? ಅದು ಯಾಕೆ ? ಎಲ್ಲಿ ? ಯಾವ ಕಾಲದಲ್ಲಿ ಹುಟ್ಟಿ ಬೆಳೆಯುತ್ತೆಂಬುದು ಸಲಭವಾಗಿ ತಿಳಿಯುತ್ತದೆ.

ಹಳೆಯ ಕಾಲದಲ್ಲಿ ಅಲ್ಲಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳು ಇದ್ದು ಅಲ್ಲೊಬ್ಬರು ರಾಜರು ಇರುತ್ತಿದ್ದರು. ಆ ರಾಜರಲ್ಲಿ ಕೆಲವರು ತುಂಬಾ ಒಳ್ಳೆಯವರು. ತನ್ನ ಪ್ರಜೆಗಳು ಸುಖವಾಗಿದ್ದಾರೆಯೇ ? ಅವರಿಗೇನಾದರೂ ತೊಂದರೆಗಳಿರುತ್ತವೆಯೇ ? ಆ ತೊಂದರೆಗಳಿಗೆ ಪರಿಹಾರವೇನು ? ಎಂದು ಎಲ್ಲಾ ಅವರು ಯೋಚಿಸುತ್ತಿದ್ದರು. ಅವರಲ್ಲಿ ಒಬ್ಬ ರು ರಾಜರು ಪ್ರತಿನಿತ್ಯವೂ ಬೇರೆ ವೇಷ ಧರಿಸಿ ಊರಿನಲ್ಲೆಲ್ಲಾ ಸುತ್ತಾಡಿ ಜನಗಳು ಏನೆನಸ್ತಿದ್ದಾರೆಲ್ಲಾ ಮಾತಾಡುತ್ತಾರೆಂದು ತಿಳಿದುಕೊಳ್ಳುತ್ತಿದ್ದರು. ಇದು ಅತನಿಗೊಂದು ರೂಢಿ. ಬಹು ಸೊಗಸಾದ ಕ್ರಮ ಅದು. ಒಬ್ಬ ದೊರೆ ಹೀಗೇನೇ ಮಾಡುತ್ತಿದ್ದ. ಒಂದು ದಿನ ಒಡ ನಾಗರೀಕನೊಬ್ಬನ ಮನೆ ಒಳಗೆ ನಿಂತಿದ್ದ. ಆ ನಾಗರೀಕರಿಗೂ ಆತನ ಹೆಂಡತಿಗೂ ಬಲು ಜೋರು ವಾಗ್ವಾದ ನಡೆಯುತ್ತಿತ್ತು. ' ಒಳ್ಳೆಯ ಸೀರೆಯಿಲ್ಲ. ಕುಪ್ಪಸವಿಲ್ಲ ಚೊಕ್ಕಟವಾದ ಮನೆಯಿಲ್ಲ ' ಎಂದೆಲ್ಲಾ ಹೆಂಡತಿ ಗಂಡನನ್ನು ದೂರುತ್ತಿದ್ದಳು. ತಾನೂ ಇದನ್ನು ಕೇಳಬೇಕು. ಎಂದು ದೊರೆಯು ಅಲ್ಲಿಯೇ ದಿಗ್ಬಂಧಿಸಿಬಿಟ್ಟ. ಸರಿ, ಇಬ್ಬರಿಗೂ ಮಾತು ಆಗುತ್ತಿರುವುದನ್ನು ಕೇಳುತ್ತಾ ನಿಂತು ಕೊಂಡನು. ಒಳಗಡೆ ಹೆಂಡತಿಯ ಕಟೊಕ್ಕಿಗಳನ್ನು ಕೇಳಿ ಕೇಳಿ ಬೇಸತ್ತ ಗಂಡನಿಗೆ ಬಹುಜೋರಾಯಿತು. ಹೆಂಡತಿಯ ಮಾತಿಗೆ ಪ್ರತ್ಯುತ್ತರವನ್ನು ಕೂಟ್ಟೇ ಬಿಟ್ಟನು. " ಲೇ ! ನನಗೇನಾದರೂ ತಿಂಗಳಿಗೆ ಎಂಟಾಣೆ ತಲುಬಿನ ಸರ್ಕಾರಿ ನೌಕರಿ ಇದ್ದಿದ್ದರೆ, ಆರು ತಿಂಗಳಿಗೆ ಒಳ್ಳೆಯ ಅರಮನೆಯಂಥಾ ಮನೆ ಕಟ್ಟಿಸಿ ನಿನ್ನ ಕತ್ತಿಗೆ ಎರಡು ಸೇರು ಚಿನ್ನದ ಅಡ್ಡಿಗೆ ಮಾಡಿ ಹಾಕುತ್ತಿದ್ದೆ. ನಿನ್ನ ದುರದೃಷ್ಟಕ್ಕೆ ದೊರೆ ನನಗೆ ಯಾವ ಕೆಲಸಾನೂ ಕೊಟ್ಟೇ ಇಲ್ಲ " ಎಂದನು. ಇದನ್ನೆಲ್ಲಾ ಕೇಳುತ್ತಿದ್ದ ದೊರೆಗೆ ಆತ್ಯಾಶ್ಚರ್ಯವಾಯಿತು. ' ತಿಂಗಳಿಗೆ ಎಂಟಾಣೆ ಸಂಪಾದಿಸಲಾಂದವನು ಅಧಿಕಂತಹ ಗಂಡನು ? ಇತನಿಗೊಂದು ಚಾಕರಿಯನ್ನು ಕೊಡಲೇ ಬೇಕು ' ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಮನೆಗೆ ಹೋದನು.

ಮಾರನೆಯ ದಿನ ಬೆಳಗಾಡೊಡನೆಯೇ ಹಿಂದಿನ ದಿನ ಕೆಲಸವಿಲ್ಲದುದಕ್ಕಾಗಿ ಮರುಗುತ್ತಿದ್ದ ಆ ನಾಗರೀಕನನ್ನು ಒರಹೇಳಿ ಕಳುಹಿಸಿದನು. ಆತ ಒಂದೊಡನೆಯೇ ದೊರೆಯು, ' ಏನಯ್ಯಾ, ನಿನಗೆ ಏನು ಕೆಲಸ ಮಾಡಲು ಬರುತ್ತೆ ?

' ಏನು ಅಪ್ಪಣೆಯಾಪರೂ ಆ ಕೆಲಸವನ್ನು ಮಾಡುತ್ತೇನೆ '

' ನೀನು ನಾಳೆಯಿಂದ ಇಲ್ಲಿ ಅಶ್ವಶಾಲೆಯಲ್ಲಿ ಕೆಲಸಕ್ಕೆ ಸೇರಬೇಕು. ಅಲ್ಲಿ ಬಾಗಲಲ್ಲಿ ಕೂತುಕೊಂಡಿದ್ದು ಪ್ರತಿನಿತ್ಯವೂ ಒಳಗೆ ಬಂದ ಮತ್ತು ಹೊರಕ್ಕೆ ಹೋದ ಕುದುರೆಗಳ ಲೆಕ್ಕವನ್ನು ಬರೆದು ತಿಂಗಳಿಗೊಮ್ಮೆ ಇಲ್ಲಿ ತೋರಿಸಬೇಕು. ನಿನಗೆ ತಿಂಗಳಿಗೆ ಎಂಟಾಣೆ ತಲಬು ಮಾಡಿದೆ ' ಎಂದು ಹೇಳಿದರು. ಆ ದನ್ನು ಕೇಳಿಡೊಡನೆಯೇ ನಾಗರೀಕನಿಗೆ ಪರಮ ಸಂತೋಷವಾಯಿತು. ಕ್ಷಣ ಲೇ ಅಲ್ಲಿಂದ ಮನೆಗೆ ಹೋಗಿ ತನ್ನ ಸಂತೋಷದ ಸುದ್ದಿಯನ್ನು ಹೆಂಡತಿಗೆ ತಿಳಿಸಿದನು. ಮಾರನೆಯ ದಿನ ನೌಕರಿಗೆ ಹಾಜರಾಗಲು ತಕ್ಕ ಸನ್ನಾಹವನ್ನು ಯೋಚಿಸಿದನು. ಮನೆಯಲ್ಲಿದ್ದ ಹಳೆಯ ಸೀರೆಗಳನ್ನೆಲ್ಲಾ ಹರಿದು ಸಂಣ ಸಂಣ ಚಿಂದಿಗಳನ್ನಾಗಿ ಮಾಡಿದನು. ಎಲ್ಲವನ್ನೂ ಒಟ್ಟುಗೂಡಿಸಿ ಗಂಟು ಕಟ್ಟಿ ಒಂದು ಕಡೆ ಇಟ್ಟುಕೊಂಡನು. ಅಂದಿನಿಂದಲೇ ತಮ್ಮ ವಂದೃಷ್ಟವೆಲ್ಲವೂ ಕಳೆದುಹೋಯಿತೆಂದು ತಿಳಿದುದರಿಂದ ದಂಗತಿಗಳು ಪರಮಾನಂದಭರಿತರಾದರು.

ಮಾರನೆಯ ದಿನ ಬೆಳಗ್ಗೆ ನಾಗರೀಕ ಉಚಿತ ವೇಷ ಭೂಷಾದಿಗಳ ಸಹಿತ ಅರಮನೆ ಕುದುರೆ ಲಾಯದ ಹೇಟಿನಲ್ಲಿ ನೌಕರಿಗೆ ಹಾಜರಾದನು. (ಸಶೇಷ)

' ಮಲ್ಲ '

ಮಳೇ ಆಯನನ್ನು ಕಾಂಗ್ರೆಸ್ಸಿನವರು ಕರೆತಂದರು !

ಲಕ್ನೋದಿಂದ ಮೂಢ ನಂಬಿಕೆಯ ಕಥೆಯೊಂದು ಬಂದಿದೆ ಬೆಳಿಗ್ಗೆ ಗೋವಿಂದ ವಲ್ಲಭ ಪಂತರು ಗೌರ್ನರನ್ನು ಭೇಟಿ ಮಾಡಿದರು ಸಂಜೆ ಮಳೆ ಬಂತು ಈ ಭೇಟಿಯ ಫಲವೇ ಮಳೆ ಎಂದರು ಜನ. ಈ ವಿಚಾರವನ್ನು ಲಕ್ನೊ ಮೂಲಕ ಪ್ರಯಾಣ ಮಾಡಿದ ನೆಹರೂರವರಿಗೆ ತಿಳಿಸಿದಾಗ ಅವರು ನಕ್ಕು ತಮ್ಮನ್ನೂ ' ಸಹ ಜನ ಮಿಳೆರಾಯರನ್ನು ಕರೆಸುವ ಶಕ್ತಿಯುಳ್ಳವನೆಂದು ಭಾವಿಸಿರುವ ವಿಚಾರವಾಗಿ ' ಕತೆ ಹೇಳಿದರು. ಅವರು ಫಾರವಾಲಕ್ಕೆ ಹೋದ ದಿನ ಅಲ್ಲಿ ಬಳ್ಳೇ ವಳ ಬಿತ್ತಂತೆ. ಮತ್ತೂ ಒಂದು ಕತೆ ಹೇಳಿದರು. ಕಳೆದ ವರ್ಷ ಸಿಮ್ಲಾದಲ್ಲಿ ಕಾಂಗ್ರೆಸ್ ನಾಯಕರು ವೈಸರಾಯರನ್ನು ಭೇಟಿಮಾಡಿದ ಕಾಲದಲ್ಲಿ ಮೂರು ವರ್ಷಗಳಿಂದ ಬಾರದಂಥ ಮಳೆ ಆಗ ಬಂತಂತೆ. ಬೆಟ್ಟ ಗುಡ್ಡಗಳೆಲ್ಲಾ ಆಗ ಹಚ್ಚ ಹಸಿರಾಯಿತೆಂದರು ನೆಹರು.

ಸು ಭಾ ಷ್

ರವರ

ಜೀವನ ಚರಿತ್ರೆ

ಹುಟ್ಟಿದ್ದು, ಬೆಳೆದದ್ದು, ದೇಶಕ್ಕಾಗಿ ಸತತವೂ ದುಡಿದದ್ದು, ಇಂದು ಸಾಧಿಸಿದ್ದು ಎಲ್ಲವನ್ನೂ ಸಂಗ್ರಹಿಸಿ ಕೊಡಲಾಗಿದೆ.

ಅಂದು ಬಾಬು —

— ಇಂದು ನೇತಾಜಿ

ಬರೆದವರು **"ಕಾಂತ್"**

ಸಾಹಿತ್ಯ ಮಂದಿರ

ಜಗನ್ಮೋಹನ ಬಂಗ್ಲೆ ರಸ್ತೆ

ಮೈಸೂರು

At Opera —

3 ನೇ ವಾರ

ಪರಂಜ್ಯೋತಿ

ಏ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ

. ಬಾಲ ಸುಬ್ರಹ್ಮಣ್ಯಂ ಒಯಗೌರ

ಕೃಷ್ಣ ಮಧುರಂ ಪಾತ್ರೆದಾರರು

ಮುಂದಿನ ವಿನೋದ

ಸುರೇಂದ್ರ, ಮೇಹತಾಬ್

ಪಾತ್ರವಹಿಸಿರುವ

ವಿಶ್ವಾಸ್

No. R 7-61/45-46

ಮೈಸೂರು ಸಿಟಿ ರೇಷನಿಂಗ್

1946 ನೆ ಇಸವಿ ಫೆಬ್ರವರಿ ಮಾಹೆ 28 ನೆ ತಾರೀಖು ಗುರುವಾರ ದಿನಸ ಮೈಸೂರು ಸಿಟಿಯಲ್ಲಿರುವ ಎಲ್ಲ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) **ಟಿ. ವಿ. ರೆಡ್ಡಿ,**

ರೇಷನಿಂಗ್ ಆಫೀಸರ್,

16-2-46 ಮೈಸೂರು.

ಹಸಕ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

At Ranjit

2 nd Week

TAQDEER

ತಕದೀರ್

ನಾಗಿರೀಸ್, ಮೋತಿಲಾಲ್, ಚಾರ್ಲಿ

ಉಡುಪುಗಳನ್ನು ಅತಿ ಬೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಉಡುಪಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಚಿತ್ತಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪಥಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡಿ ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೨-೪-೦ ಮಾತ್ರ.

ನಮ್ಮ ಸುಗಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ಕ್ಕೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Sriramp st MYSORE